CRNA-S-KND

# ಕನ್ನಡ / KANNADA

## ಪತ್ರಿಕೆ II / Paper II

## (ಸಾಹಿತ್ಯ) / (LITERATURE)

ಸಮಯ : ಮೂರು ಗಂಟೆ
*Time Allowed : **Three Hours***

ಗರಿಷ್ಠ ಅಂಕಗಳು : **250**
*Maximum Marks : **250***

---

### ಪ್ರಶ್ನೆ ಪತ್ರಿಕೆ ವಿಶೇಷ ಸೂಚನೆಗಳು

**ದಯವಿಟ್ಟು ಪ್ರಶ್ನೆಗಳಿಗೆ** ಉತ್ತರಿಸುವ **ಮೊದಲು ಕೆಳಗಿನ ಪ್ರತಿಯೊಂದು ಸೂಚನೆಗಳನ್ನು** ಸರಿಯಾಗಿ ಓದಿರಿ :

ಇದರಲ್ಲಿ **ಎಂಟು** ಪ್ರಶ್ನೆಗಳನ್ನು **ಎರಡು** ಭಾಗಗಳಲ್ಲಿ ವಿಂಗಡಿಸಲಾಗಿದೆ.

ಅಭ್ಯರ್ಥಿಗಳು ಎಲ್ಲಾ ಪ್ರಶ್ನೆಗಳಲ್ಲಿ **ಐದು** ಪ್ರಶ್ನೆಗಳಿಗೆ ಉತ್ತರಿಸಬೇಕು.

ಅಭ್ಯರ್ಥಿಗಳು ಪ್ರಶ್ನೆಗಳ ಸಂಖ್ಯೆ ***1*** ಮತ್ತು ***5***ಕ್ಕೆ ಉತ್ತರಿಸುವುದು ಕಡ್ಡಾಯ, ಮತ್ತು ಇನ್ನುಳಿದ **ಮೂರು** ಪ್ರಶ್ನೆಗಳಲ್ಲಿ ಪ್ರತಿಯೊಂದು ವಿಭಾಗದಿಂದ ಕನಿಷ್ಠ **ಒಂದು** ಪ್ರಶ್ನೆಗಾದರೂ ಉತ್ತರಿಸಬೇಕು.

ಪ್ರತಿಯೊಂದು ಪ್ರಶ್ನೆಗಳಿಗಿರುವ ಅಂಕಗಳನ್ನು ಆಯಾ ಪ್ರಶ್ನೆಗಳ ಮುಂದೆಯೇ ನಮೂದಿಸಲಾಗಿದೆ.

ಉತ್ತರಗಳನ್ನು ಅತ್ಯಗತ್ಯವಾಗಿ **ಕನ್ನಡದಲ್ಲೇ (ಕನ್ನಡ ಲಿಪಿಯಲ್ಲೇ)** ಬರೆಯಬೇಕು.

ಕೆಲವು ಪ್ರಶ್ನೆಗಳಿಗೆ ಉತ್ತರಿಸಲು ನಿರ್ದಿಷ್ಟಪಡಿಸಿದ ಶಬ್ದಗಳ ಮಿತಿಯನ್ನು ಸರಿಯಾಗಿ ಪಾಲಿಸಬೇಕು.

ಉತ್ತರಿಸಿದ ಪ್ರಶ್ನೆಗಳನ್ನು ಕ್ರಮಬದ್ಧವಾಗಿ ಪರಿಗಣಿಸಿ ಎಣಿಕೆ ಮಾಡಲಾಗುವುದು. ಅಪೂರ್ಣ ಉತ್ತರಗಳನ್ನು ಹೊಡೆದು ಹಾಕದಿದ್ದಲ್ಲಿ ಅವುಗಳನ್ನು ಎಣಿಕೆಯಲ್ಲಿ ಪರಿಗಣಿಸಲಾಗುತ್ತದೆ. ಪ್ರಶ್ನೋತ್ತರ ಸಹಿತವಾಗಿರುವ ಪುಸ್ತಿಕೆಯಲ್ಲಿ ಬರೆಯದೆ ಉಳಿದ ಪೂರ್ಣ ಖಾಲಿ ಪುಟಗಳನ್ನು ಮತ್ತು ಭಾಗಶಃ ಖಾಲಿ ಇರುವ ಪುಟಗಳನ್ನು ಸ್ಪಷ್ಟವಾಗಿ ಹೊಡೆದು ಹಾಕಬೇಕು.

### Question Paper Specific Instructions

***Please read each of the following instructions carefully before attempting questions :***

*There are **EIGHT** questions divided in **TWO SECTIONS**.*

*Candidate has to attempt **FIVE** questions in all.*

*Questions no. **1** and **5** are compulsory and out of the remaining, any **THREE** are to be attempted choosing at least **ONE** question from each section.*

*The number of marks carried by a question / part is indicated against it.*

*Answers must be written in **KANNADA (Kannada script)**.*

*Word limit in questions, wherever specified, should be adhered to.*

*Attempts of questions shall be counted in sequential order. Unless struck off, attempt of a question shall be counted even if attempted partly. Any page or portion of the page left blank in the Question-cum-Answer Booklet must be clearly struck off.*

---

## SECTION A

Q1. ಈ ಕೆಳಗಿನ ಪದ್ಯಗಳ ಸಂದರ್ಭವನ್ನು ಸೂಚಿಸಿ ಅವುಗಳ ಭಾವ ಮತ್ತು ಸ್ವಾರಸ್ಯವನ್ನು ಕುರಿತು ಬರೆಯಿರಿ. (ಪ್ರತಿಯೊಂದೂ 150 ಪದಗಳ ಉತ್ತರ ಮಿತಿಯಲ್ಲಿ) 10×5=50

(a) ಚಾಗದ ನಸ್ಸಿಯ ಕಲಿತನ
ದಾಗರಮೆನೆ ನೆಗಪ್ದಿ ಕರ್ಣನೊಡಲಿಂದೆಂತುಂ
ಪೋಗಲ್ಕರಿಯದೆ ಸಿರಿಕರ
ಮಾಗಳ್ ಕವಿಕರ್ಣ ತಾಳಸಂಚಳೆಯಾದಳ್ 10

(b) ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗಂಜಿದೊಡೆಂತಯ್ಯ ?
ಸಮುದ್ರದ ತಡಿಯಲೊಂದು ಮನೆಯ ಮಾಡಿ
ನೆರೆತೊರೆಗಳಿಗಂಜಿದೊಡೆಂತಯ್ಯ ?
ಸಂತೆಯೊಳಗೊಂದು ಮನೆಯ ಮಾಡಿ
ಶಬ್ದಕ್ಕೆ ನಾಚಿದೊಡೆಂತಯ್ಯ ?
ಚೆನ್ನಮಲ್ಲಿಕಾರ್ಜುನ ದೇವ ಕೇಳಯ್ಯ
ಲೋಕದೊಳಗೆ ಹುಟ್ಟಿದ ಬಳಿಕ
ಸ್ತುತಿನಿಂದೆಗಳು ಬಂದರೆ
ಮನದಲ್ಲಿ ಕೋಪವತಾಳದೆ ಸಮಾಧಾನಿಯಾಗಿರಬೇಕು. 10

(c) ನಡು ನೀರ ನಡುವಿಂದೆ ಗಳಗಳನೆ ನಡೆತಂದು
ಮಂದೆ ನಿಂದಿರೆ ಕಂಡು ಭಕ್ತ ಸಂಕುಳ ಮೆಲ್ಲ
ಇಂದು ಶೇಖರನ ಶರಣರ್ಗೆ ಸರಿಯಿನ್ನಿಲ್ಲ
ಶರಣರ್ಗೆ ಸರಿಯಪ್ಪ ಹರಿಬೊಮ್ಮರೇನುಂಟೆ
ಶರಣರ್ಗೆ ಸರಿವಪ್ಪ ಸುರಪತಿಗಳೇನುಂಟೆ 10

(d) ಅರುಣ ಸಾರಥಿ ಭುವನ ಕಾರ್ಯದ
ಧುರವ ಹೊರನೆ ಕೃಷ್ಣನಲ್ಲಾ
ನರನ ಸಾರಥಿಯಾಗನೇ ಪರಕಾರ್ಯದನುವರಿದು
ಹರನ ಸಾರಥಿ ಕಮಲ ಸಂಭವ
ಸುರರ ಕಾರ್ಯಕ್ಕೊಡಗದೆ ಸ
ತ್ಪುರುಷರೇ ಪರಕಾರ್ಯ ನಿಷ್ಠರು ಕೋಪವೇಕೆಂದ 10

(e) ಮಾರ್ಗವಲ್ಲೆಂಬಂತೆ ತೋರ್ಪುದಸ್ವರಿಗೆ ಸ
ನ್ಮಾರ್ಗದೊಳವನಿರು ತಿಹನು
ಆರ್ಗೆ ತಿಳಯಬಹುದಾತ್ಮ ವಿಜ್ಞಾನಿಯಂ
ತರ್ಗತವನು ಜಿನ ಬಲ್ಲ 10

Q2. (a) ಪಂಪ ಮತ್ತು ನಾರಾಣಪ್ಪ ಚಿತ್ರಿಸಿರುವ ಕರ್ಣಪಾತ್ರವು ವ್ಯವಸ್ಥೆಯ ಕರಾಳ ಮುಖಗಳನ್ನು ಅನಾವರಣಗೊಳಿಸಿದೆ. ಈ ಮಾತನ್ನು ಪರಿಶೀಲಿಸಿರಿ. 20

(b) ವಡ್ಡಾರಾಧನೆಯ ಕಥೆಗಳು ಧರ್ಮ ಪ್ರಸಾರಣೆಯನ್ನು ಉದ್ದೇಶವಾಗಿರಿಸಿಕೊಂಡರೂ ಆ ಕಾಲದ ವಸ್ತು ಸ್ಥಿತಿಗೆ ಕನ್ನಡಿ ಹಿಡಿಯುತ್ತವೆ. ಪಠ್ಯದ ಹಿನ್ನೆಲೆಯಲ್ಲಿ ಪರಿಶೀಲಿಸಿರಿ. 20

(c) ಭೋಗ-ಯೋಗಗಳ ಸಾಮರಸ್ಯವನ್ನು 'ಭರತೇಶ ವೈಭವ'ದಲ್ಲಿ ಹೇಗೆ ಚಿತ್ರಿಸಲಾಗಿದೆ ? ವಿವರಿಸಿರಿ. 10

Q3. (a) ಧರ್ಮದ ಮುಖೇನ ಸಾಮಾಜಿಕ ಸಮಾನತೆಯನ್ನು ವಚನಕಾರರು ಹೇಗೆ ಪ್ರತಿಪಾದಿಸಿದರು ? ವಚನಗಳ ಆಧಾರದಲ್ಲಿ ಚರ್ಚಿಸಿರಿ. 20

(b) ಭಕ್ತಿ ಮತ್ತು ವೈಚಾರಿಕತೆ ಕನಕದಾಸರ ಕೃತಿಗಳಲ್ಲಿ ಹೇಗೆ ಮೈದಾಳಿದೆ ? ಪರಿಶೀಲಿಸಿರಿ. 20

(c) ನಂಬಿಯಣ್ಣನ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕಿನ ಸಾಧನೆಯನ್ನು ಹರಿಹರ ಚಿತ್ರಿಸಿದ ಬಗೆಯನ್ನು ವಿಶ್ಲೇಷಿಸಿರಿ. 10

Q4. (a) ಕೆಳವರ್ಗದ ವಚನಕಾರರ ಸಂವೇದನೆ, ವಸ್ತು-ವಿಷಯ ಮತ್ತು ಶೈಲಿಗಳು ಉಳಿದ ವಚನಕಾರರಿಗಿಂತ ಭಿನ್ನವಾಗಿವೆ – ಚರ್ಚಿಸಿರಿ. 20

(b) ಪಂಪ ಮಾರ್ಗ-ದೇಶಿಗಳ ಸಮನ್ವಯವನ್ನು 'ವಿಕ್ರಮಾರ್ಜುನ ವಿಜಯ' ದಲ್ಲಿ ಸಾಧಿಸಿದ ರೀತಿಯನ್ನು ಪರಿಶೀಲಿಸಿರಿ. 20

(c) 'ರೂಪಕ ಸಾಮ್ರಾಜ್ಯದ ಚಕ್ರವರ್ತಿ – ಕುಮಾರ ವ್ಯಾಸ' ಈ ಮಾತನ್ನು ಸಮರ್ಥಿಸಿರಿ. 10

## SECTION B

**Q5.** ಈ ಕೆಳಗಿನವುಗಳನ್ನು ಕುರಿತು ಟಿಪ್ಪಣಿ ಬರೆಯಿರಿ. **10×5=50**

**(ಪ್ರತಿಯೊಂದೂ 150 ಪದಗಳ ಉತ್ತರ ಮಿತಿಯಲ್ಲಿ)**

(a) ನವೋದಯ ಕಾವ್ಯದ ವೈಶಿಷ್ಟ್ಯಗಳನ್ನು ಪರಿಚಯಿಸಿರಿ. 10

(b) 'ಒಡಲಾಳ'ದ ಸಾಕವ್ವ ಪಾತ್ರವನ್ನು ಪರಿಶೀಲಿಸಿರಿ. 10

(c) 'ಜನಪದ ಗೀತಾಂಜಲಿ' ಯಲ್ಲಿ ಜನಪದರ ಆಶೋತ್ತರಗಳು ಹೇಗೆ ದಾಖಲಾಗಿವೆ ? ವಿವರಿಸಿರಿ. 10

(d) ಜನಪದ–ಜಾನಪದಗಳ ಸ್ವರೂಪ ಮತ್ತು ಅರ್ಥ ವಿವರಣೆ. 10

(e) ಗಿರೀಶ ಕಾರ್ನಾಡರ 'ತುಘಲಕ್' ನಾಟಕದಲ್ಲಿ ಆಧುನಿಕ ಸಂವೇದನೆ. 10

**Q6.** (a) ದಲಿತ–ಬಂಡಾಯ ಕಾವ್ಯದ ವಸ್ತು ಮತ್ತು ಧೋರಣೆಗಳನ್ನು ಪರಿಚಯಿಸಿರಿ. 20

(b) 'ಶೂದ್ರ ತಪಸ್ವಿ' ನಾಟಕದಲ್ಲಿ ಚಿತ್ರಣಗೊಂಡಿರುವ ವರ್ಗ–ಸಂಘರ್ಷದ ಸ್ವರೂಪವನ್ನು ವಿಶ್ಲೇಷಿಸಿರಿ. 20

(c) ಪ್ರಗತಿ ಶೀಲ ಕಥೆಗಳ ತಾತ್ವಿಕತೆಯನ್ನು ವಿವರಿಸಿರಿ. 10

**Q7.** (a) ಪ್ರಕೃತಿ–ಮನುಷ್ಯನ ಸಂಬಂಧಗಳು ಮಾನವ ಜೀವನವನ್ನು ಮುನ್ನಡೆಸಿವೆ ಎಂಬುದನ್ನು 'ಬೆಟ್ಟದ ಜೀವ' ಕಾದಂಬರಿ ಕಟ್ಟಿಕೊಡುತ್ತದೆ – ಈ ಮಾತನ್ನು ವಿಶ್ಲೇಷಿಸಿರಿ. 20

(b) ಸ್ತ್ರೀ ಬದುಕಿನ ದುಃಖದುಮ್ಮಾನಗಳನ್ನು 'ಮಾಧವಿ' ಕಾದಂಬರಿಯಲ್ಲಿ ಜೀವಂತವಾಗಿ ಚಿತ್ರಿಸಲಾಗಿದೆ – ವಿವರಿಸಿರಿ. 20

(c) 'ಗಾದೆಗಳು ಜನಪದ ಜೀವನದ ವಿವೇಕ' – ಈ ಮಾತನ್ನು 'ಬೀದಿಮಕ್ಕಳು ಬೆಳೆದೋ' ಕೃತಿಯ ಆಧಾರದಲ್ಲಿ ಚರ್ಚಿಸಿರಿ. 10

**Q8.** (a) ಕನ್ನಡ ಜನಪದ ಕಥೆಗಳ ವಸ್ತು ಮತ್ತು ಆಶಯಗಳನ್ನು ಪಠ್ಯದ ಆಧಾರದಿಂದ ವಿವರಿಸಿರಿ. 20

(b) ಎ.ಎನ್. ಮೂರ್ತಿರಾಯರು 'ದೇವರು' ಕೃತಿಯಲ್ಲಿ ಕಲ್ಪನೆಯ ನಂಬಿಕೆ ಮತ್ತು ಆಚರಣೆಗಳ ಸತ್ಯಾಸತ್ಯತೆಯನ್ನು ಸಾಧಾರಣವಾಗಿ ಚರ್ಚಿಸಿದ್ದಾರೆ ಈ ಮಾತನ್ನು ಪರಿಶೀಲಿಸಿರಿ. 20

(c) ಸಾವಿರದ ಒಗಟುಗಳು ಕೃತಿ ಜನಪದರ ಜಾಣ್ಮೆಗೆ ಸಾಕ್ಷಿಯಾಗಿದೆ – ಚರ್ಚಿಸಿರಿ. 10